# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 897 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23.02.2024 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ತಯಾರಕರು ಹಾಗೂ ಸಹಾಯಕರಿಗೆ ನೀಡುವ ಗೌರವಧನವನ್ನು ಕಾಲಕಾಲಕ್ಕೆ ಪಾವತಿ ಮಾಡದಿರುವುದರಿಂದ ಬಿಸಿಯೂಟದ ಸಿಬ್ಬಂದಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಿಬ್ಬಂದಿಗಳಿಗೆ ಪ್ರತಿ ಮಾಹೆಯ ಗೌರವಧನವನ್ನು ಆಯಾ ತಿಂಗಳುಗಳಲ್ಲಿ ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು). | ಸರ್ಕಾರದ ಗಮನಕ್ಕೆ ಬಂದಿದೆ.<br><br>ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಆರ್ಥಿಕ ವರ್ಷದಲ್ಲಿ ಶಾಲೆಗಳು ನಡೆಯುವ ದಿನಗಳಲ್ಲಿ ಅಂದರೆ ಜೂನ್ ಮಾಹೆಯಿಂದ ಮಾರ್ಚ್ ಮಾಹೆಯವರೆಗೆ 10 ತಿಂಗಳ ಅವಧಿಗೆ ಮಾತ್ರ ಸಂಭಾವನೆಯನ್ನು ಪಾವತಿಸಲಾಗುತ್ತದೆ. ಪ್ರಸಕ್ತ ಸಾಲಿನಲ್ಲಿ ಅಡುಗೆ ಸಿಬ್ಬಂದಿಯ ಆಧಾರ್ ವ್ಯಾಲಿಡೇಷನ್, ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆ ಆಗಿ ಪಕ್ಕದ ಶಾಲೆಗೆ ನಿಯೋಜಿಸಲ್ಪಟ್ಟ ಸಿಬ್ಬಂದಿಗೆ ಡಿಬಿಟಿ–ಪಿಎಫ್‌ಎಂಎಸ್‌ನಲ್ಲಿನ ತಾಂತ್ರಿಕ ತೊಂದರೆಯಿಂದಾಗಿ ಕೆಲವೊಂದು ಸಿಬ್ಬಂದಿಗೆ ಗೌರವಧನ ಪಾವತಿಸುವಲ್ಲಿ ತೊಂದರೆಯಾಗಿದ್ದು, ಕಾಲಕಾಲಕ್ಕೆ ಆಗುತ್ತಿರುವ ತಾಂತ್ರಿಕ ತೊಂದರೆಗಳನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಂಪರ್ಕಿಸಿ ದೋಷಗಳನ್ನು ಸರಿಪಡಿಸಿ ತಕ್ಷಣ ಗೌರವ ಸಂಭಾವನೆಯನ್ನು ನೇರ ಸೌಲಭ್ಯ ವರ್ಗಾವಣೆ ವ್ಯವಸ್ಥೆಯ ಮೂಲಕ ಅಡುಗೆ ಸಿಬ್ಬಂದಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಕ್ರಮವಹಿಸಲಾಗಿದೆ. |
| ಆ) | ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಈ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; ಇವರ ಗೌರವಧನಕ್ಕಾಗಿ ಅಗತ್ಯವಿರುವ ಅನುದಾನ ಎಷ್ಟು; ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಬಿಡುಗಡೆಗೆ ಬಾಕಿಯಿರುವ ಅನುದಾನ ಎಷ್ಟು; ಜಿಲ್ಲಾವಾರು ವಿವರ ನೀಡುವುದು; | ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳ ಹಾಗೂ ಸದರಿ ಸಿಬ್ಬಂದಿಗಳಿಗೆ ಸಂಭಾವನೆಯನ್ನು ಪಾವತಿಸಲು ಅಗತ್ಯವಿರುವ ವಾರ್ಷಿಕ ಅನುದಾನದ ಹಾಗೂ ಬಿಡುಗಡೆಗೆ ಬಾಕಿಯಿರುವ ಅನುದಾನದ ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ. **(ಅನುಬಂಧ–1)** |
| ಇ) | ಬೇರೆ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅತ್ಯಂತ ಕಡಿಮೆ ಗೌರವಧನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇವರಿಗೆ ಗೌರವಧನ ಹೆಚ್ಚಳ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ರಾಜ್ಯ ಸರ್ಕಾರದಿಂದ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ ಅಡುಗೆ ಸಿಬ್ಬಂದಿಗಳ ಗೌರವ ಸಂಭಾವನೆಯನ್ನು ಹೆಚ್ಚಿಸಲಾಗಿದೆ. ಅದರಂತೆ ಪ್ರಸ್ತುತ ಮುಖ್ಯ ಅಡುಗೆಯವರಿಗೆ ಮಾಸಿಕವಾಗಿ ರೂ 3700/– ಮತ್ತು ಸಹಾಯಕ ಅಡುಗೆಯವರಿಗೆ ರೂ 3600/– ಗೌರವ ಸಂಭಾವನೆಯನ್ನು ಪಾವತಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಮಧ್ಯಾಹ್ನ ಉಪಹಾರ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಡುಗೆ ಸಿಬ್ಬಂದಿಗಳಿಗೆ ಎಷ್ಟು ಗೌರವ |

| | | |
|---|---|---|
| | | ಸಂಭಾವನೆಯನ್ನು ನೀಡಬೇಕು ಎನ್ನುವುದನ್ನು ನಿರ್ಧರಿಸುವುದು ರಾಜ್ಯ ಸರ್ಕಾರದ ನೀತಿಯ ವಿಷಯವಾಗಿರುವುದರಿಂದ, ಬೇರೆ ರಾಜ್ಯಗಳಲ್ಲಿನ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಗೌರವ ಸಂಭಾವನೆಯನ್ನು ರಾಜ್ಯದಲ್ಲಿನ ಅಡುಗೆ ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಗೌರವ ಸಂಭಾವನೆಗೆ ಹೋಲಿಸಿ ಅನ್ವಯಿಸಲು ಬರುವುದಿಲ್ಲ. |

ಇಪಿ 21 ಎಂಎಂಎಸ್ 2024

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**

| ಅನುಬಂಧ-1 | | | | | |
|---|---|---|---|---|---|
| **2023-24ನೇ ಸಾಲಿನಲ್ಲಿ ಪಿಎಂ ಪೋಷಣ್ (ಮಧ್ಯಾಹ್ನ ಉಪಹಾರ ಯೋಜನೆಯಡಿ ಜಿಲ್ಲಾವಾರು ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ, ಗೌರವಧನಕ್ಕೆ ಬೇಕಿರುವ ವಾರ್ಷಿಕ ಅನುದಾನದ ಮೊತ್ತ, ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಆಗಿರುವ ಅನುದಾನ ಮತ್ತು ಬಿಡುಗಡೆಗೆ ಬಾಕಿ ಇರುವ ಅನುದಾನದ ವಿವರ** | | | | | |
| ಕ್ರ. ಸಂ | ಜಿಲ್ಲೆಯ ಹೆಸರು | ಅಡುಗೆ ಸಿಬ್ಬಂದಿ ಸಂಖ್ಯೆ | ವಾರ್ಷಿಕ ಬೇಕಿರುವ ಅನುದಾನ | ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಆಗಿರುವ ಅನುದಾನ | ಬಿಡುಗಡೆ ಆಗಬೇಕಿರುವ ಬಾಕಿ ಅನುದಾನ |
| 1 | ಬೆಂಗಳೂರು ನಗರ | 4422 | 158828000 | 77911900 | 80916100 |
| 2 | ಬೆಂಗಳೂರು ಗ್ರಾಮಾಂತರ | 2076 | 74658000 | 36662200 | 37995800 |
| 3 | ಚಿತ್ರದುರ್ಗ | 4517 | 159570000 | 79750650 | 79819350 |
| 4 | ಕೋಲಾರ | 3907 | 131656000 | 69086150 | 62569850 |
| 5 | ಶಿವಮೊಗ್ಗ | 4632 | 160720000 | 81489900 | 79230100 |
| 6 | ತುಮಕೂರು | 6897 | 240570000 | 121651150 | 118918850 |
| 7 | ಮೈಸೂರು | 5119 | 181190000 | 90091550 | 91098450 |
| 8 | ಚಿಕ್ಕಮಗಳೂರು | 2679 | 94390000 | 47183050 | 47206950 |
| 9 | ದಕ್ಷಿಣ ಕನ್ನಡ | 3213 | 112730000 | 56232850 | 56497150 |
| 10 | ಹಾಸನ | 4267 | 149270000 | 75157150 | 74112850 |
| 11 | ಕೊಡಗು | 945 | 34020000 | 16561250 | 17458750 |
| 12 | ಮಂಡ್ಯ | 3630 | 124700000 | 63864000 | 60836000 |
| 13 | ಬೆಳಗಾವಿ | 9767 | 347270000 | 171384650 | 175885350 |
| 14 | ವಿಜಯಪುರ | 6008 | 213480000 | 105713100 | 107766900 |
| 15 | ಧಾರವಾಡ | 2852 | 101320000 | 50232400 | 51087600 |
| 16 | ಉತ್ತರ ಕನ್ನಡ | 4313 | 152330000 | 76004850 | 76325150 |
| 17 | ಕಲಬುರಗಿ | 6308 | 216480000 | 111029100 | 105450900 |
| 18 | ಬಳ್ಳಾರಿ | 2855 | 97840000 | 50200250 | 47639750 |
| 19 | ಬೀದರ್ | 4292 | 152120000 | 75363900 | 76756100 |
| 20 | ರಾಯಚೂರು | 4900 | 171200000 | 86544500 | 84655500 |
| 21 | ಯಾದಗಿರಿ | 3100 | 103800000 | 54573500 | 49226500 |
| 22 | ದಾವಣಗೆರೆ | 3453 | 122930000 | 60888350 | 62041650 |
| 23 | ರಾಮನಗರ | 2421 | 85206000 | 42739450 | 42466550 |
| 24 | ಚಿಕ್ಕಬಳ್ಳಾಪುರ | 2734 | 97540000 | 48475300 | 49064700 |
| 25 | ಚಾಮರಾಜನಗರ | 1957 | 66370000 | 34392150 | 31977850 |
| 26 | ಉಡುಪಿ | 1940 | 66200000 | 34197500 | 32002500 |
| 27 | ಬಾಗಲಕೋಟೆ | 4837 | 167970000 | 85144150 | 82825850 |
| 28 | ಗದಗ | 2563 | 87042000 | 44957850 | 42084150 |
| 29 | ಹಾವೇರಿ | 3958 | 138380000 | 70060100 | 68319900 |
| 30 | ಕೊಪ್ಪಳ | 3292 | 113520000 | 58014900 | 55505100 |
| 31 | ವಿಜಯನಗರ | 3962 | 144860000 | 69677200 | 75182800 |
| **ಒಟ್ಟು ಮೊತ್ತ** | | **121816** | **4268160000** | **2145235000** | **2122925000** |